ಓ ಎಸ್ ನಂ. 71/2022
ಪಿ ಡಬ್ಲ್ಯು 1
ದಿನಾಂಕ 16/02/2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 8 ಮತ್ತು 9 ನೇ ಪ್ರತಿವಾದಿಗಳ ಪರಃ ಶ್ರೀ ಕೆ ಎಂ ಜೆ ವಕೀಲರಿಂದಃ

ನನ್ನ ತಂದೆಯ ಹೆಸರು ಮಾದಪ್ಪ. ಅವರ ತಂದೆಯ ಹೆಸರು ಗಿಡ್ಡಪ್ಪ. 1 ರಿಂದ 7 ನೇ ಪ್ರತಿವಾದಿಗಳು ಯಾರ ಮಕ್ಕಳು ಎಂದರೆ ಸಾಕ್ಷಿ ಈರಪ್ಪನ ಮಕ್ಕಳು ಎಂದು ನುಡಿಯುತ್ತಾರೆ. ಈರಪ್ಪನ ತಂದೆಯ ಹೆಸರು ಮಲ್ಲಣ್ಣ ಆಗಿರುತ್ತದೆ. ಸದರಿ ಮಲ್ಲಣ್ಣನವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಮಗಳು. ಅವರೆಂದರೆ 1.ಬಸಪ್ಪ 2. ಈರಪ್ಪ 3. ರುದ್ರಪ್ಪ 4. ಗೌರಮ್ಮ ಆಗಿರುತ್ತದೆ. ಸದರಿ ಗೌರಮ್ಮ ಮೃತ ಪಟ್ಟಿದ್ದು ಅವರಿಗೆ ಮಕ್ಕಳು ಇರುವುದಿಲ್ಲ. ವಾದಪತ್ರಕ್ಕೆ ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆ ಸಮಯದಲ್ಲಿ ಮಲ್ಲಣ್ಣನ ಮಗಳಾದ ಗೌರಮ್ಮರವರ ಬಗ್ಗೆ ಹೇಳಿದ್ದೇನೋ ಇಲ್ಲವೋ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಬಸಪ್ಪರವರಿಗೆ 4 ಜನ ಹೆಣ್ಣು ಮಕ್ಕಳು. ಅವರೆಂದರೆ 1. ನೀಲಮ್ಮ 2. ಬಸಮ್ಮ 3. ಚಂದ್ರಮ್ಮ 4. ಶಾರದಮ್ಮ ಆಗಿರುತ್ತಾರೆ. ಈರಪ್ಪರವರಿಗೆ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ರುದ್ರಪ್ಪರವರಿಗೆ ಇಬ್ಬರು ಗಂಡು

ಮಕ್ಕಳು ಮತ್ತು ಒಬ್ಬರು ಹೆಣ್ಣು ಮಗಳು, ಅವರೆಂದರೆ ನಾಗರಾಜು ಉಮಾಪತಿ ಮತ್ತು ಮಲ್ಲಮ್ಮ ಆಗಿರುತ್ತಾರೆ. ಸದರಿ ಮಲ್ಲಮ್ಮರರಿಗೆ 5 ಜನ ಗಂಡು ಮತ್ತು 4 ಜನ ಹೆಣ್ಣು ಮಕ್ಕಳು. ಪ್ರಸ್ತುತ ದಾವೆಯಲ್ಲಿ ಮಲ್ಲಮ್ಮರವರ ಮಕ್ಕಳನ್ನು ಯಾರನ್ನು ಸಹ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಬಸಪ್ಪರವರ ಮಕ್ಕಳ ಪೈಕಿ ಚಂದ್ರಮ್ಮ ಮತ್ತು ಶಾರದಮ್ಮ ಬದುಕಿದ್ದು, ನೀಲಮ್ಮ ಮತ್ತು ಬಸಮ್ಮರವರು ಮೃತ ಪಟ್ಟಿರುತ್ತಾರೆ. ಸದರಿ ನೀಲಮ್ಮ ಮತ್ತು ಬಸಮ್ಮರವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನಾನಗಿ ಮಾಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿದು ನೀಲಮ್ಮರವರ ಮಕ್ಕಳು ಮರುಳಸಿದ್ದಪ್ಪ. ಓಂಕಾರಪ್ಪ, ಸುವರ್ಣಮ್ಮ, ರುದ್ರಾಣಮ್ಮ, ವೇದಾವತಿ ಮತ್ತು ನಿರ್ಮಲ ಆಗಿರುತ್ತಾರೆ ಎಂದು ನುಡಿಯುತ್ತಾರೆ.

ಈರಪ್ಪರವರ ಮಕ್ಕಳ ಪೈಕಿ ಎಲ್ಲಾರೂ ಸಹ ಬದುಕಿರುತ್ತಾರೆ. (1 ರಿಂದ 7 ನೇ ಪ್ರತಿವಾದಿಗಳು). ರುದ್ರಪ್ಪರವರ ಇಬ್ಬರು ಗಂಡು ಮಕ್ಕಳು ಈ ದಾವೆಯ 8 ಮತ್ತು 9 ನೇ ಪ್ರತಿವಾದಿಗಳು ಎಂದರೆ ಸರಿ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ದಾವೆಯನ್ನು ಜಮೀನುಗಳ ಮೇಲೆ ಹಾಕಿರುತ್ತೇನೋ ಅಥವಾ ಸೈಟು ಮತ್ತು ಮನೆಗಳ ಮೇಲೆ ಹಾಕಿರುತ್ತೇನೋ ಎಂದರೆ ಸಾಕ್ಷಿ ಸೈಟು ಮತ್ತು ಮನೆಯನ್ನು ಮಾತ್ರ

ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಜಮೀನು ಇಲ್ಲವೆ ಎಂದರೆ ಸಾಕ್ಷಿ 4 ಎಕರೆ ಇದೆ, ದಾಖಲೆಗಳನ್ನು ಸಿಗುತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ 4 ಎಕರೆ ಜಮೀನು ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಬಸಪ್ಪರವರ ಹೆಸರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಸರ್ವೆ ನಂಬರು ಗೊತ್ತಿಲ್ಲ, ಪಹಣಿ ಯಾರ ಹೆಸರಿನಲ್ಲಿದೆ ಎಂದು ಸಹ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸದರಿ ದಾಖಲೆಗಳನ್ನು ಹುಡುಕಲು ಈಗಲೂ ಪ್ರಯತ್ನ ಪಡುತ್ತಿದ್ದೇನೆ. 4 ಎಕರೆ ಜಮೀನು ಬಸಪ್ಪರವರ ಹೆಸರಿಗೆ ಸರ್ಕಾರದಿಂದ ಮಂಜೂರಾದ ಬಗ್ಗೆ ಗ್ರಾಂಟ್ ಸರ್ಟಿಫಿಕೇಟನ್ನು ನೋಡಿರುತ್ತೇನಾ ಎಂದರೆ ಸಾಕ್ಷಿ ಅದನ್ನು ನಾನು ಪಡೆದುಕೊಳ್ಳಲು ಪರಿಶೀಲಿಸುತ್ತಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಯಾರು ಯಾರ ಹೆಸರಿನಲ್ಲಿ ಎಷ್ಟು ಇದೆ ಎಂದು ನನಗೆ ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ನಾನು ಈಗ ಮರೆತಿದ್ದೇನೆ ಎಂದು ನುಡಿಯುತ್ತಾರೆ.

ಈರಪ್ಪರವರ ಮಕ್ಕಳು ವಿಭಾಗ ಕೋರಿ ಓ ಎಸ್ ನಂ.31/2012 ರಂತೆ ದಾವೆ ಸಲ್ಲಿಸಿದ್ದ ವಿಚಾರ ನನಗೆ ಗೊತ್ತಿತ್ತು ಎಂದರೆ ಸಾಕ್ಷಿ ಆ ದಾವೆ ಮುಕ್ತಾಯಗೊಂಡ ನಂತರ ಆ ವಿಚಾರ ನನಗೆ ಗೊತ್ತಾಯಿತು ಎಂದು ನುಡಿಯುತ್ತಾರೆ. ಓ ಎಸ್ ನಂ.31/2012 ರ ದಾವೆ ಯಾವಾಗ ಮುಕ್ತಾಯಗೊಂಡಿರುತ್ತದೆ ಎಂದು

ಹೇಳಲಾಗುತ್ತದೆಯಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಬಸಪ್ಪ ಈರಪ್ಪ ಮತ್ತು ರುದ್ರಪ್ಪರವರು ಬದುಕಿದ್ದ ಸಮಯದಲ್ಲಿ ಅವರ ಪೈಕಿ ವಿಭಾಗ ಮಾಡಿಕೊಂಡಿದ್ದು ಆನಂತರ ಈರಪ್ಪರವರ ಮಕ್ಕಳು ಓ ಎಸ್ ನಂ.31/2012 ರ ದಾವೆಯಲ್ಲಿ ಈರಪ್ಪರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಬಸಪ್ಪ ಈರಪ್ಪ ಮತ್ತು ರುದ್ರಪ್ಪರವರ ನಡುವೆ ಯಾವುದೇ ವಿಭಾಗ ಆಗಿಲ್ಲ ಎಂದು ನುಡಿಯುತ್ತಾರೆ. 02/04/1953 ರಲ್ಲಿಯೇ ಮಲ್ಲಣ್ಣರವರ ಮೂರು ಜನ ಮಕ್ಕಳಾದ ಬಸಪ್ಪ ಈರಪ್ಪ ಮತ್ತು ರುದ್ರಪ್ಪರವರು ವಿಭಾಗ ಮಾಡಿಕೊಂಡಿದ್ದರು ಎಂದರೆ ಸುಳ್ಳು. ಮೇಲ್ಕಂಡ ವಿಭಾಗದಲ್ಲಿ 8 ಮತ್ತು 9 ನೇ ಪ್ರತಿವಾದಿಗಳಾದ ತಂದೆಯಾದ ರುದ್ರಪ್ಪರವರ ಹೆಸರಿಗೆ ದಾವಾ ಐಟಂ ನಂ.1 ಮತ್ತು 4 ರ ಆಸ್ತಿಗಳು ಬಂದಿರುತ್ತವೆ ಎಂದರೆ ಸುಳ್ಳು. ರುದ್ರಪ್ಪರವರು ಮರಣ ಹೊಂದಿದ ನಂತರ ಸದರಿ ಆಸ್ತಿಗಳ ಖಾತೆ ರುದ್ರಪ್ಪರವರ ಹೆಂಡತಿಯಾದ ರುದ್ರಮ್ಮರವರ ಹೆಸರಿಗೆ ಪೌತಿ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿ ಯಾವುದೇ ವಿಭಾಗವಾಗಿಲ್ಲ, ಆದರೆ ಖಾತೆ ಬದಲಾವಣೆ ಆಗಿದೆ ಎಂದು ನುಡಿಯುತ್ತಾರೆ. ರುದ್ರಮ್ಮರವರು ಮರಣ ಹೊಂದಿದ ನಂತರ 8 ಮತ್ತು 9 ನೇ ಪ್ರತಿವಾದಿಗಳಾದ ನಾಗರಾಜು ಮತ್ತು ಉಮಾಪತಿರವರು ದಾವಾ ಐಟಂ ನಂ.1 ಮತ್ತು 4 ರ ಆಸ್ತಿಗಳಿಗೆ ಸಂಬಂದಪಟ್ಟಂತೆ ದಿನಾಂಕ

**08/10/2004** ರಂದು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಯಾವುದೇ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ವಿಭಾಗ 8 ಮತ್ತು 9 ನೇ ಪ್ರತಿವಾದಿಗಳು ವಿಭಾಗ ಮಾಡಿಕೊಂಡ ನಂತರ ದಾವಾ ಐಟಂ ನಂ.1 ಮತ್ತು 4 ರ ಆಸ್ತಿಗಳ ಖಾತೆ 9 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸಾಕ್ಷಿ ಹೌದು ಖಾತೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಪ್ರಸ್ತುತ 9 ನೇ ಪ್ರತಿವಾದಿಯೇ ದಾವಾ ಐಟಂ ನಂ.1 ಮತ್ತು 4 ರ ಸ್ವತ್ತುಗಳ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಈ ಹಿಂದೆಯೇ ಮಲ್ಲಣ್ಣರವರ ಮಕ್ಕಳು ವಿಭಾಗ ಆಗಿರುವುದರಿಂದ ಪುನಃ ವಿಭಾಗ ಕೇಳಲು ಬರುವುದಿಲ್ಲ, ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಾಗಲೇ ವಿಭಾಗ ಆಗಿರುವುದರಿಂದ ಅವು ಒಟ್ಟು ಕುಟುಂಬದ ಆಸ್ತಿಗಳಾಗಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.